# ಶ್ರೀಚೈತನ್ಯ ಮಹಾಪ್ರಭು – ೩

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ

## ಗಯಾಯಾತ್ರೆ ಮತ್ತು ಆಧ್ಯಾತ್ಮಿಕ ಪರಿವರ್ತನೆ

ಪೂರ್ವಬಂಗಾಳ ಪ್ರದೇಶದಲ್ಲಿ ದಿಗ್ವಿಜಯ ಸಾಧಿಸಿದ ಕೆಲಕಾಲದ ನಂತರ, ನಿಮಾಯಿ, ಪಿತೃಗಳಿಗೆ ಪಿಂಡಪ್ರದಾನ ಮಾಡಲು ಗಯೆಗೆ ತೆರಳಿದ. ಗಯೆಯಲ್ಲಿ ಶ್ರಾದ್ಧವನ್ನು ಮಾಡಿದರೆ ಪೂರ್ವಿಕರಿಗೆ ಸ್ವರ್ಗಗತಿಯು ಲಭಿಸುವುದು ಎನ್ನುವುದು ಪುರಾತನ ನಂಬಿಕೆ. ಶ್ರಾದ್ಧಕ್ರಿಯೆಗಳ ನಂತರ, ಗದಾಧರ ದೇವರ ಕ್ಷೇತ್ರವಾದ ವಿಷ್ಣುಪಾದಕ್ಕೆ ಹೋಗಿ ಪೂಜಿಸಿದ. ಅಲ್ಲಿ ಅವನಲ್ಲಿ ವಿಚಿತ್ರ ಭಾವವೊಂದು ಉದ್ದೀಪನ ವಾಯಿತು. ಪ್ರಜ್ಞೆ ತಪ್ಪಿ, ಕೆಳಗೆ ಬೀಳುವುದರಲ್ಲಿದ್ದ. ಅವನನ್ನು ಬೀಳದಂತೆ ಹಿಂದಿನಿಂದ ಹಿಡಿದು ನಿಲ್ಲಿಸಿದವನು ಈಶ್ವರ ಪುರಿ ಎಂಬ ತಪಸ್ವಿ. ಈತ ಸುಪ್ರಸಿದ್ಧರಾದ ಮಾಧವೇಂದ್ರ ಪುರಿ ಎಂಬುವವರ ಶಿಷ್ಯ. ಮಾಧವೇಂದ್ರ ಪುರಿಗಳು ಮೊದಲಬಾರಿಗೆ ಸಂನ್ಯಾಸಿಗಳಲ್ಲಿ ಭಕ್ತಿತತ್ತ್ವವನ್ನು ಪರಿಚಯ ಮಾಡಿಸಿದವರು. ನಿಮಾಯಿ ನದಿಯಾದಲ್ಲಿದ್ದಾಗಲೆ ಈಶ್ವರ ಪುರಿಯನ್ನು ನೋಡಿದ್ದ, ಆದರೆ ಸ್ನೇಹಸಂಬಂಧವೇನೂ ಇರಲಿಲ್ಲ. ನಿಮಾಯಿ ಸಹಜಪ್ರಜ್ಞೆಗೆ ಮರಳಿದೊಡನೆ, ರಾಧೆಗೆ ಶ್ರೀಕೃಷ್ಣನ ಮೇಲೆ ಇದ್ದ ಅಮರಪ್ರೇಮದ ಮಿಂಚುನೋಟವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಹಾಯಮಾಡುವಂತೆ ಈಶ್ವರ ಪುರಿಯಲ್ಲಿ ಕೇಳಿಕೊಂಡನಂತೆ. ಇದನ್ನು ಕೇಳಿ ಮಾಧವೇಂದ್ರಪುರಿಗೆ ಅತ್ಯಾಶ್ಚರ್ಯವಾಯಿತು. ಅವರು ಶ್ರೀಕೃಷ್ಣಮಂತ್ರವನ್ನು ನಿಮಾಯಿಗೆ ಉಪದೇಶಿಸಿದರು. ಆ ಮಂತ್ರದ ಅರ್ಥ – " ಗೋಪಿಕಾಪ್ರಿಯನಾದ ಶ್ರೀಕೃಷ್ಣನಿಗೆ ನಮಸ್ಕಾರ" ಎಂದು. ಈ ಮಂತ್ರದ ಉಚ್ಚಾರದಿಂದ ನಿಮಾಯಿಯಲ್ಲಿ ಒಡನೆ ಪರಿವರ್ತನೆ ಉಂಟಾಗಿ ಆತನ ಹರ್ಷಭಾವವೆಲ್ಲ ಕಣ್ಮರೆಯಾಗಿ ಹೋಯಿತು. ಅದರ ಸ್ಥಾನದಲ್ಲಿ ಅನಿರ್ವಚನೀಯವಾದ ದುಃಖ ಮತ್ತು ಆಂತರಿಕ ವೇದನೆ ತುಂಬಿಕೊಂಡವು. ಶ್ರೀಕೃಷ್ಣನ ದರ್ಶನಕ್ಕಾಗಿ ಮತ್ತೆ ಮತ್ತೆ ವಿರಹೋನ್ಮಾದದ ಉಬ್ಬರಗಳು ಮನಸ್ಸಿನಲ್ಲಿ ಕಾಣಿಸಿಕೊಂಡವು. ಪ್ರತಿ ಉಬ್ಬರದ ನಂತರ ಸಂತೃಪ್ತಿಯ ಪ್ರಶಾಂತತೆ, ಕೆಲ ಸಮಯದ ನಂತರ ಮತ್ತೊಂದು ಭಾವೋನ್ಮಾದದ ಅಲೆ – ಹೀಗೆ ನಿಮಾಯಿಯ ಅಂತಃಕರಣ ದುಃಖೋದ್ರೇಕದ ಶಿಖರದಿಂದ ಹರ್ಷೋದ್ರೇಕದ ಶಿಖರದೆಡೆಗೆ, ಪುನಃ– ಹರ್ಷೋದ್ರೇಕದ ಶಿಖರದಿಂದ ದುಃಖೋದ್ರೇಕದ ಶಿಖರದೆಡೆಗೆ ಬಾರಿಬಾರಿಗೂ ಹೊಯ್ದಾಡುತ್ತಿತ್ತು. ನದಿಯಾಗೆ ವಾಪಸು ಬಂದ ನಿಮಾಯಿ ಎಲ್ಲ ಪ್ರಾಪಂಚಿಕ ವಿಚಾರಗಳಲ್ಲಿಯೂ ನಿರಾಸಕ್ತನಾಗಿದ್ದ. ಒಡನೆ ವೃಂದಾವನದತ್ತ ಧಾವಿಸಿ ಹೋಗಿ ಶ್ರೀಕೃಷ್ಣಮೂರ್ತಿಯ ದರ್ಶನ ಮಾಡಬೇಕೆಂದು ಹಾತೊರೆಯುತ್ತಿದ್ದ. ಅವನೊಡನಿದ್ದವರು ಬಹು ಪ್ರಯತ್ನಪಟ್ಟು ಆತನ ತಾಯಿಯ ಬಳಿ ಹೋಗಲು ಅವನನ್ನು ಒತ್ತಾಯಿಸಿದರು. ಅದಕ್ಕೊಪ್ಪಿದ ನಿಮಾಯಿ ತಾಯಿಯನ್ನು ನೋಡಲು ತನ್ನ ಮನೆಗೆ ಹಿಂತಿರುಗಿದ್ದು, ಸಂಪೂರ್ಣವಾಗಿ ಪರಿವರ್ತನೆಗೊಂಡ ನಂತರವೆ.

ನಿಮಾಯಿಯ ಪಾಲಿಗೆ ಉಲ್ಲಾಸ ಮತ್ತು ಪಾಂಡಿತ್ಯ ಪ್ರದರ್ಶನದ ಆ ದಿನಗಳು ಕಳೆದುಹೋದವು. ದೀನರಲ್ಲಿ ದೀನನಾಗಿ ಕಂಡುಬರುತ್ತಿದ್ದ ಅವನು ಶ್ರೀಕೃಷ್ಣನ ಹೊರತು ಮತ್ತೇನನ್ನೂ ಆಡಲೊಲ್ಲ. ಶುಕ್ಲಾಂಬರನೆಂಬುವನ ಮನೆಗೆ ಹೋದ ನಿಮಾಯಿ 'ಶ್ರೀಕೃಷ್ಣ' ಎಂದು ವಿಲಪಿಸುತ್ತ ನೆಲಕ್ಕೆ ಬಿದ್ದ. ಪ್ರಜ್ಞೆ ಮರುಕಳಿಸಿದಾಗ ಎದೆಯ ಮೇಲೆ ಕೈಯಿಟ್ಟು ಕೊಂಡು ಬಡಬಡಿಸಿದ: "ನಾನು ಶ್ರೀಕೃಷ್ಣನನ್ನು ಹಿಡಿದುಕೊಂಡಿದ್ದೆ. ಆದರೆ, ಅಯ್ಯೋ, ಅವನು ತಪ್ಪಿಸಿಕೊಂಡು ಓಡಿಹೋದನೇ? ಅದರಿಂದ ನನ್ನ ಹೃದಯದಲ್ಲಿ ಉಂಟಾಗಿರುವ ಬಿರುಕನ್ನು ಶ್ರೀಕೃಷ್ಣನಲ್ಲದೆ ಯಾರು ತಾನೆ ತುಂಬುವರು? ಇಡೀ ಬ್ರಹ್ಮಾಂಡವೂ ಅದನ್ನು ತುಂಬಲಾರದು. ನನ್ನ ಕೃಷ್ಣನನ್ನು ನನ್ನ ಬಳಿ ಕರೆತರುವವರು ಯಾರೂ ಇಲ್ಲವೇ?"

ಇಂತಹ ಸ್ಥಿತಿಯಲ್ಲಿದ್ದ ನಿಮಾಯಿಯನ್ನು ಮತ್ತೆ ಸಾಧಾರಣ ಸ್ಥಿತಿಗೆ ಕರೆತರುವುದು ಹೇಗೆ? ಅದಕ್ಕೆ ಅವನ ಹಿಂದಿನ ಗುರುಗಳಾದ ಗಂಗಾದಾಸರು ಉಪಾಯವೊಂದನ್ನು ಸೂಚಿಸಿದರು. ಅದೇನೆಂದರೆ ನಿಮಾಯಿ ತನ್ನ ಶಾಲೆಯನ್ನು ಮತ್ತೆ ತೆರೆಯುವುದು. ನಿಮಾಯಿ ಶಾಲೆಯನ್ನೇನೋ ತೆರೆದ. ಆದರೆ ಮೊದಲಿನಂತೆ ತನ್ನ ಶಿಷ್ಯರಿಗೆ ಬೋಧಿಸಲು ಅವನಿಗೆ ಸಾಧ್ಯವಾಗಲಿಲ್ಲ. ಪುಸ್ತಕವನ್ನು ತೆರೆಯುತ್ತಿದ್ದಂತೆಯೆ 'ಹರಿ' ಎಂದು ಉಚ್ಚರಿಸುತ್ತ ಆವೇಶಗೊಳ್ಳುತ್ತಿದ್ದ. ಕೆಲದಿನಗಳ ಕಾಲ ತರಗತಿಗಳನ್ನು ನಡೆಸಲು ಪ್ರಯತ್ನಿಸಿದನಾದರೂ ವಿದ್ಯಾರ್ಥಿಗಳ ಸಂಗಡ ಅವನು ಮಾತನಾಡುತ್ತಿದುದು ಶ್ರೀಕೃಷ್ಣನ ಕುರಿತೇ ಹೊರತು ಪಠ್ಯವಿಷಯವನ್ನಲ್ಲ. ಕಡೆಗೆ ತನ್ನ ವಿದ್ಯಾರ್ಥಿಗಳ ಸಮಯವನ್ನು ವ್ಯರ್ಥ ಮಾಡುತ್ತಿರುವುದಕ್ಕೆ ಕ್ಷಮೆ ಕೇಳುತ್ತ ಹೇಳಿದ, " ಸ್ನೇಹಿತರೇ, ನಾನು ಪಾಠವನ್ನು ಆರಂಭಿಸಿದ ಕೂಡಲೆ, ಅತ್ಯಂತ ಸುಂದರನಾದ ಒಬ್ಬ ಬಾಲಕನು ನನ್ನ ಮುಂದೆ ನಿಂತುಬಿಡುತ್ತಾನೆ. ಅವನದು ನೀಲಮೇಘವರ್ಣ; ಕೊಳಲೂದುತ್ತಿರುತ್ತಾನೆ. ಅವನತ್ತ ನನ್ನ ಸರ್ವೇಂದ್ರಿಯಗಳೂ

ಸೆಳೆಯಲ್ಪಡುವವು. ಹಾಗಾದಾಗ ನಾನು ಸುತ್ತಲಿನೆಲ್ಲವನ್ನೂ ಮರೆತುಬಿಡುವೆನು. ಹಿಂದಿನ ಹಾಗೆ ನಾನು ಪಾಠ ಮಾಡಲು ಅಶಕ್ತ. ದಯಪಟ್ಟು ನಿಮ್ಮೆಲ್ಲರಿಂದ ಬೀಳ್ಕೊಡಲು ನನಗೆ ಅನುಮತಿ ಕೊಡಿ." ಆದರೆ ಆ ವಿದ್ಯಾರ್ಥಿಗಳು ಹೋಗಲು ಒಪ್ಪಲಿಲ್ಲ. ಹಾಗಾದರೆ ಪಾಠದ ಬದಲು ಶ್ರೀಕೃಷ್ಣನಾಮ ಸಂಕೀರ್ತನೆಯನ್ನೇ ನಡೆಸೋಣ ಎಂದು ನಿಮಾಯಿ ಸೂಚಿಸಿದಾಗ ಅವರೆಲ್ಲರೂ ಒಪ್ಪಿದರು. "ಹರಿ ಬೋಲ್, ಹರಿ ಬೋಲ್, ಕೃಷ್ಣ ಬೋಲ್, ಕೃಷ್ಣ ಬೋಲ್"– ಹೀಗೆ ಗುಂಪಿನಲ್ಲಿ ಹಾಡುತ್ತ ನರ್ತಿಸಲು ಆರಂಭಿಸಿದರು. ಭಕ್ತಿಸುಧೆಯ ನದಿ ಅಲ್ಲಿ ಪ್ರವಹಿಸಲಾರಂಭಿಸಿತು. ನೆರೆದಿದ್ದ ಜನರೆಲ್ಲ ಅದರಲ್ಲಿ ಮಿಂದು ಪುನೀತರಾದರು.



ನದಿಯಾ– ನಿಮಾಯಿಯ ಲೀಲಾಸ್ಥಾನದ ಒಂದು ದೃಶ್ಯ

### ಸ್ವರೂಪ ಪ್ರಕಟನೆ

ಇಲ್ಲಿಗೆ ಮುಗಿಯಿತು ನಿಮಾಯಿ ಪಂಡಿತನ ಪಾಂಡಿತ್ಯದ ಬಾಳುವೆ; ಅದರ ಸ್ಥಾನದಲ್ಲಿ ಉಗಮವಾಯಿತು ಕೃಷ್ಣಪ್ರೇಮದ ಪ್ರಸಾರಕನಾದ ಶ್ರೀಚೈತನ್ಯ ಮಹಾಪ್ರಭುವೆಂಬ ಮಹಾಪುರುಷನ ಮಹಾನ್ ವ್ಯಕ್ತಿತ್ವ. ಆ ಸಂದರ್ಭದಲ್ಲಿ ಭೂತಹಿಡಿದವರು ತೋರುವಂತಹ ಅಸಹಜ ಉನ್ಮಾದಗಳೇ ಮೊಳಕೆಯೊಡೆಯುತ್ತಿದ್ದ ಅವನ ಕೃಷ್ಣಪ್ರೇಮದ ಲಕ್ಷಣಗಳು. ಅವಾದರೋ ಹಲವು ಬಗೆಗಳು: ಒಮ್ಮೆ ನಗು, ಮತ್ತೊಮ್ಮೆ ಅಳು, ಮತ್ತೊಮ್ಮೆ ಎಡೆಬಿಡದ ಕೃಷ್ಣನಾಮದ ಆಕ್ರಂದನ. ಒಂದೇ ಎರಡೇ. ಒಮ್ಮೆ ಮರ ಹತ್ತಿದರೆ, ಮತ್ತೊಮ್ಮೆ ತಪ್ಪಿಸಿಕೊಂಡು ಓಡುತ್ತಿರುವ ಶ್ರೀಕೃಷ್ಣನ ಪಾದಗಳನ್ನು ಹಿಡಿದುಕೊಂಡ ಹಾಗೆ ಅಥವಾ ಅವನೊಡನೆ ಒಂದಾಗಿಹೋದ ಹಾಗೆ ಭಾವಿಸಿಕೊಳ್ಳುವನು; ಇನ್ನೊಮ್ಮೆ ಕಾಲದ ಪರಿವೆಯೆ ಮರೆತುಹೋಗಿ, ಬೆಳಗ್ಗೆಯನ್ನೆ ಮಧ್ಯಾಹ್ನವೆಂದು ಕಲ್ಪಿಸಿಕೊಳ್ಳುವನು.

ಉತ್ಕಟ ಭಕ್ತಿಯ ಲಕ್ಷಣಗಳಾದ ರೋದನ, ನಗು, ಕಂಪನ, ಸ್ವೇದನ (ಬೆವರುವುದು), ರೋಮಾಂಚನ, ಬಾಹ್ಯಪ್ರಜ್ಞಾಶೂನ್ಯತೆ ಮುಂತಾದವು ನಿಮಾಯಿಯ ಶರೀರದಲ್ಲಿ ಕಾಣತೊಡಗಿದವು. ಒಮ್ಮೆ ದೇಹ ಉಷ್ಣದಿಂದ ಒಣಗಿದಂತೆ ತೋರುವುದು, ತದನಂತರ ಧಾರಾಕಾರವಾಗಿ ಬೆವರು ಸುರಿಯಲಾರಂಭಿಸುವುದು, ಮೈಯೆಲ್ಲ ನಡುಗಲಾರಂಭಿಸುವುದು. ಒಮ್ಮೆ ಹಲ್ಲುಗಳನ್ನು ಕಚ್ಚಿಕೊಂಡು ಕಟಕಟ ಶಬ್ದ ಮಾಡುವನು. ಮತ್ತೊಮ್ಮೆ ಅವನ ಉಸಿರು ನಿಂತು ದೇಹವೆಲ್ಲ ಕಲ್ಲಿನಂತೆ ನಿಶ್ಚಲವಾಗಿಬಿಡುವುದು! ಮರುಗಳಿಗೆಯಲ್ಲಿ ಬಿರುಗಾಳಿಯಂತೆ ಅದೇ ಉಸಿರು ಸೊಯ್ಯನೆ ರಭಸದಿಂದ ಆಡತೊಡಗುವುದು. ಒಂದು ಸಮಯದಲ್ಲಿ ಭಾರವಾಗಿರುವ ಅವನ ದೇಹ ಕೆಲಕಾಲದ ನಂತರ ಒಂದೇ ತೋಳಿನಿಂದ ಎತ್ತಬಹುದಾದಷ್ಟು ಹಗುರವಾಗಿಬಿಡುವುದು. ಒಮ್ಮೆ ಶರೀರ ವೃತ್ತದಂತೆ ವಕ್ರವಾಗಿ ಬಗ್ಗಿಹೋದರೆ, ಮತ್ತೊಮ್ಮೆ ಅಪಸ್ಮಾರದ ದೆಸೆಯಿಂದ ತನ್ನ ಸಹಜ ಹೊಂಬಣ್ಣದ ಕಾಂತಿಯನ್ನು ಕಳೆದುಕೊಂಡು ಕಳೆಗುಂದುವುದು. ಕಣ್ಣಿನ ಬಣ್ಣವೇ ಬದಲಾಗುವುದು ಮತ್ತು ಕೂದಲುಗಳೆಲ್ಲ ನೆಟ್ಟಗೆ ನಿಂತು, ಅವುಗಳ ಬುಡದಲ್ಲಿ ಬೊಬ್ಬೆಗಳೆದ್ದು ರಕ್ತ ಸೋರುವುದು. ಈ ಎಲ್ಲ ದೈವೀಚಿಹ್ನೆಗಳ ವಿವರಗಳನ್ನು ಶ್ರೀಕೃಷ್ಣ ಚೈತನ್ಯರ ಸಮಕಾಲೀನರು ಬರೆದ ಅಧಿಕೃತ ಬರಹಗಳಲ್ಲಿಯೆ ಕಾಣಬಹುದು. ಕೃಷ್ಣಪ್ರೇಮದ ಉಗಮದ ಕಾಲದಲ್ಲಿ ವ್ಯಕ್ತವಾದ ಈ ಬಾಹ್ಯ ಚಿಹ್ನೆಗಳೆಲ್ಲವೂ ಕೆಲವೊಮ್ಮೆ ನಿಯಂತ್ರಿಸಲಾಗದಷ್ಟು ತೀವ್ರವಾಗಿದ್ದವು. ಹಾಗೂ ನಿಮಾಯಿಯ ವ್ಯಕ್ತಿತ್ವವನ್ನು ಅಲ್ಲೋಲಕಲ್ಲೋಲವನ್ನಾಗಿ ಮಾಡಿಬಿಟ್ಟವು. ಕೆಲಕಾಲ ಕಳೆದ ನಂತರವಷ್ಟೆ ಅವನ ಮಾನಸಿಕ ಸಂವೇದನೆಗಳು ಮತ್ತು ಬಾಹ್ಯ ವರ್ತನೆಗಳು ಹದಬಂದಿಗೆ ಬಂದವು; ಒಂದು ಬಗೆಯ ಶಿಸ್ತಿಗೆ ಒಳಪಟ್ಟು ಅವನ ನಿಯಂತ್ರಣಕ್ಕೆ ಸಿಲುಕಿದವು.

ನದಿಯಾದ ಬಹಳ ಮಂದಿ ಪಂಡಿತರಿಗೆ ನಿಮಾಯಿ ಪಂಡಿತನನ್ನು ಕಂಡರೆ ದ್ವೇಷವಿತ್ತು. ಅವನಲ್ಲಿ ಕಂಡುಬಂದ ಮೇಲಿನ ಬೆಳವಣಿಗೆಗಳಲ್ಲಿ ಅವರು ಗುರುತಿಸಿದ್ದು ವಿಚಿತ್ರ ಬಾಹ್ಯಚಿಹ್ನೆಗಳನ್ನು ಮಾತ್ರ. ನಿಮಾಯಿ ಹುಚ್ಚನಾಗಿಬಿಟ್ಟಿದ್ದಾನೆ ಎಂಬ ವದಂತಿಯನ್ನು ಅವರು ಎಲ್ಲೆಡೆ ಹರಡಿದರು. ಆದರೂ ಆ ನಾಡಿನ ಕೆಲವು ನೈಜ ಭಕ್ತರು ಆ ಚಿಹ್ನೆಗಳು ಭಗವದ್ಭಕ್ತಿಯ ಅಭಿವ್ಯಕ್ತಿಗಳು ಎಂದು ಕಂಡುಕೊಂಡರು. ಮತ್ತೆ ಕೆಲವರಂತೂ

ನಿಮಾಯಿಯನ್ನು ಭಗವದವತಾರವೆಂದೇ ಗ್ರಹಿಸಿದರು. ಅವರಲ್ಲಿ ಅದ್ವೈತ ಆಚಾರ್ಯ ಎಂಬುವರು ಒಬ್ಬರು. ಅವರು ನದಿಯಾ ಪಕ್ಕದ ಶಾಂತಿಪುರ ಎಂಬ ಗ್ರಾಮದಲ್ಲಿ ವಾಸವಾಗಿದ್ದು ವೈಷ್ಣವ ಸಂಗಡದ ನೇತಾರ ಎಂದೆನಿಸಿಕೊಂಡವರು. ಕೆಲವು ವೈಷ್ಣವರು ನಿಮಾಯಿಯಲ್ಲಿ ಕಂಡುಬಂದ ಅಪೂರ್ವ ಪರಿವರ್ತನೆಯ ಬಗ್ಗೆ ತಿಳಿಸಲು ಅವರಲ್ಲಿ ಹೋದಾಗ ಅವರ ಪ್ರತಿಕ್ರಿಯೆ ಹೇಗಿತ್ತು? "ಹಿಂದಿನ ರಾತ್ರಿಯಷ್ಟೇ ಕನಸಿನಲ್ಲಿ ಕೃಷ್ಣ ಬಂದು ಮಾತನಾಡಿದನು" ಎಂದರು ಅದ್ವೈತ ಆಚಾರ್ಯರು. ಶ್ರೀಕೃಷ್ಣ ಅವರಿಗೆ ಹೇಳಿದ್ದು ಇಷ್ಟು: "ಇನ್ನು ದುಃಖಿಸದಿರು. ನಿನ್ನ ಪ್ರಾರ್ಥನೆಗೆ ಉತ್ತರ ದೊರೆತಿದೆ. ಮಾನವ ಜನಾಂಗಕ್ಕೆ ಮುಕ್ತಿಮಾರ್ಗವನ್ನು ತೋರಲು ನಾನೇ ಬಂದಿರುವೆನು." ಅದ್ವೈತ ಆಚಾರ್ಯರು ಚಕಿತರಾಗಿ ಕಣ್ಣುತೆರೆದಾಗ ಕಂಡವನು ಬೇರಾರೂ ಅಲ್ಲ, ನಿಮಾಯಿ.

ನಿಮಾಯಿಯ ನೈಜ ಸ್ವರೂಪವನ್ನು ಗುರುತಿಸಿದ ಮತ್ತೊಬ್ಬ ವ್ಯಕ್ತಿಯೆಂದರೆ ಶ್ರೀವಾಸ. ಆತನಿಗೆ ಸಂಬಂಧಿಸಿದ ಕಣ್ಣು ತೆರೆಸುವ ಘಟನೆಯೊಂದಿದೆ. ಆಗ ಬಂಗಾಳವನ್ನು ಆಳುತ್ತಿದ್ದವನು ಮುಸ್ಲಿಂ ದೊರೆಯಾದ ಹುಸೇನ್ ಷಾ. ನಿಮಾಯಿಯ ವಿರೋಧಿಗಳಲ್ಲಿ ಕೆಲವರು ಆತನಲ್ಲಿ ನಿಯೋಗವೊಂದನ್ನು ಒಯ್ದರು. ನಿಮಾಯಿ ಮತ್ತು ಅವನ ವೈಷ್ಣವ ಸಂಗಡಿಗರ ಸಂಕೀರ್ತನೆ ಭಾರೀ ಕೋಲಾಹಲವನ್ನೇ ಉಂಟುಮಾಡುತ್ತಿದೆ ಎಂದೂ ಅವರನ್ನು ಬಂಧಿಸದೆ ಇದ್ದರೆ ಆ ಪ್ರದೇಶದಲ್ಲಿ ಶಾಂತಿ ನೆಲಸದೆಂದೂ ದೂರಿತ್ತರು. ವೈಷ್ಣವರು ಇದರಿಂದ ತುಸು ಭಯಗೊಂಡಿದ್ದರು. ಆದರೆ ನಿಮಾಯಿ ನಡೆಸಿದ ಒಂದು ಚಮತ್ಕಾರ ಆ ಭಯವನ್ನೆಲ್ಲ ನೀಗಿಸಿ ಅವರಲ್ಲಿ ಅವನ ಬಗ್ಗೆ ವಿಶ್ವಾಸವನ್ನು ಮೂಡಿಸಿತು.

ಶ್ರೀವಾಸನೆಂಬ ಭಕ್ತನು ತನ್ನ ಮನೆಯ ಪೂಜಾ ಕೋಣೆಯಲ್ಲಿ ದೇವರನ್ನು ಪೂಜಿಸುತ್ತಿದ್ದನು. ಮನೆಯ ಬಾಗಿಲನ್ನು ಯಾರೋ ತಟ್ಟಿದಂತೆ ಸದ್ದಾಯಿತು. ಇದರಿಂದ ನೊಂದ ಶ್ರೀವಾಸನು, ಯಾರೆಂದು ಕೇಳಿದಾಗ, ದನಿಯೊಂದು ಉತ್ತರಕೊಟ್ಟಿತು: " ನೀನು ಯಾರನ್ನು ಕುರಿತು ಧ್ಯಾನಿಸುತ್ತಿರುವೆಯೋ ಅವನೇ ನಾನು." ಬಾಗಿಲು ತೆರೆದಾಗ ಅವನು ಕಂಡದ್ದು ನಿಮಾಯಿಯ ತೇಜಸ್ವೀ ಆಕಾರವನ್ನು. ಆಶ್ಚರ್ಯಗೊಂಡ ಶ್ರೀವಾಸ ನೋಡುತ್ತಿದ್ದಂತೆಯೆ, ನಿಮಾಯಿ ದೇವರಿಗಾಗಿ ಮೀಸಲಾಗಿಟ್ಟಿದ್ದ ಆಸನದಲ್ಲಿ ಹೋಗಿ ಕುಳಿತ. ಮಾತು ಹೊರಡದೆ ಮೌನವಾಗಿ ನಿಂತಿದ್ದ ಶ್ರೀವಾಸನಿಗೆ ಹೀಗೆಂದು ಆಜ್ಞೆ ಮಾಡಿದ: " ನೀರು ತಾ, ನಾನು ಸ್ನಾನ ಮಾಡಬೇಕು." ಬಚ್ಚಲು ಮನೆಗೆ ನಿಮಾಯಿ ಹೋದಾಗ ಅಲ್ಲಿ ಶ್ರೀವಾಸ ಕಂಡದ್ದು ಮಿಂಚುತ್ತಿರುವ ಲಕ್ಷಗಟ್ಟಲೆ ಮಿಣುಕುಗಳಿಂದ ಹೊಳೆಯುತ್ತಿದ್ದ ಸ್ವರ್ಣಮಯ ಮೂರ್ತಿಯೊಂದನ್ನು. ಸ್ನಾನ ಮಾಡುತ್ತಿದ್ದಾಗ ಅವನ ಶರೀರದಿಂದ ಹರಿಯುತ್ತಿದ್ದ ನೀರು ಕೂಡ ಉಜ್ವಲವಾಗಿತ್ತು. ಸ್ನಾನ ಮುಗಿಸಿ ನಿಮಾಯಿ ಪೂಜಾ ಕೊಠಡಿಗೆ ಹೋದ. ಅಷ್ಟರಲ್ಲಿ ಅಲ್ಲಿ ನೆರೆದಿದ್ದ ಜನರು ಆ ಕೋಣೆಯಿಂದ ಮಧುರವಾದ ವೇಣುನಿನಾದ ಹೊರಬರುತ್ತಿರುವುದನ್ನು ಆಲಿಸಿದರು. ಒಡನೆ ಭಕ್ತರು ರಾಶಿಗಟ್ಟಲೆ ಹೂವು, ಗಂಧ ಮತ್ತು ಇತರ ಪದಾರ್ಥಗಳನ್ನು ಭಕ್ತಿಯಿಂದ ತಂದು ಅರ್ಪಿಸಿದರು. ನಂತರ ನಿಮಾಯಿ ಮಲಗುವ ಕೊಠಡಿಗೆ ತನ್ನನ್ನು ಕರೆದುಕೊಂಡು ಹೋಗಿರೆಂದು ಕೇಳಿಕೊಂಡ. ನಂತರ ಅವರೆಲ್ಲರ ಮುಂದೆ ಈ ಘೋಷಣೆಯನ್ನು ಮಾಡಿದ: " ಎಲ್ಲರ ಹೃದಯಗಳಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನೇ ನಾನು. ನೀವು ಮುಸ್ಲಿಂ ರಾಜನಿಗಾಗಿ ಭಯ ಪಡಬೇಕಾದ್ದಿಲ್ಲವೆಂದು ತಿಳಿಸುವುದಕ್ಕಾಗಿಯೇ ನನ್ನ ಸ್ವರೂಪವನ್ನು ನಿಮ್ಮ ಮುಂದೆ ಪ್ರಕಟಗೊಳಿಸಿದ್ದೇನೆ. ಈ ಬಾರಿ ನಾನು ಅವತಾರವೆತ್ತಿರುವುದು ಪಾಪಿಗಳನ್ನು ಶಿಕ್ಷಿಸಲೆಂದಲ್ಲ, ಪರಿವರ್ತಿಸಲೆಂದು. ಜೀವಿಗಳು **ಭಕ್ತಿ** ಮತ್ತು **ಪ್ರೇಮದ** ಮೂಲಕ ನನ್ನನ್ನು ಹೇಗೆ ಪಡೆಯಬಹುದೆಂಬುದನ್ನು ಉಪದೇಶಿಸಲೆಂದೇ ನಾನು ಅವತರಿಸಿದ್ದೇನೆ. ರಾಜನ ಮನಸ್ಸನ್ನು ಕೂಡ ಹೇಗೆ ಪರಿವರ್ತಿಸುವೆನೆಂದು ನಾನು ನಿಮಗೆ ತೋರಿಸುತ್ತೇನೆ." ನಂತರ ತನ್ನ ಶಕ್ತಿಯ ಪ್ರದರ್ಶನ ಮಾಡಲೆಂದು ನಿಮಾಯಿ ಹತ್ತಿರದಲ್ಲಿ ನಿಂತಿದ್ದ ಚಿಕ್ಕ ಹುಡುಗಿಯೊಬ್ಬಳನ್ನು ಕರೆದು ಹೀಗೆಂದ. "ಎಲೈ ನಾರಾಯಣಿ! ಕೃಷ್ಣಪ್ರೇಮದಿಂದ ಉನ್ಮತ್ತಳಾಗು" ಒಡನೆ ಆ ಹುಡುಗಿ ಭಾವಾವಿಷ್ಟಳಾದಳು. ನಿಮಾಯಿ ಆಗ ನೆರೆದಿದ್ದ ಜನರಿಗೆ ಹೇಳಿದ: "ನಾನು ರಾಜನೊಡನೆ ವ್ಯವಹರಿಸುವುದು ಹೀಗೆಯೇ." ಕೆಲ ಸಮಯದ ನಂತರ "ನಾನು ತೆರಳುತ್ತಿದ್ದೇನೆ, ಸರಿಯಾದ ಸಮಯಕ್ಕೆ ಇನ್ನೊಮ್ಮೆ ಬರುತ್ತೇನೆ" ಎಂದು ಹೇಳುತ್ತಿದ್ದಂತೆಯೆ ನಿಮಾಯಿ ಪ್ರಜ್ಞಾಶೂನ್ಯನಾದ. ಅವನಿಗೆ ಎಚ್ಚರವಾದಾಗ, ತಾನು ಶ್ರೀವಾಸನ ಮನೆಯಲ್ಲಿ ಇರುವುದನ್ನು ಕಂಡು ಬೆರಗಾದ. ಭಕ್ತನಂತೆ ಭಗವಂತನನ್ನು ಗಟ್ಟಿಯಾಗಿ ಕರೆಯುತ್ತ ಹೀಗೆ ಪ್ರಾರ್ಥನೆ ಮಾಡಿದ: " ಓ ಕರುಣಾಳು ಕೃಷ್ಣ! ನನ್ನ ಪ್ರಾಪಂಚಿಕ ಬಯಕೆಗಳನ್ನು ನೀಗಿಸಿ, ನಿನ್ನ ಪಾದಕಮಲಗಳೆಡೆ ನನ್ನನ್ನು ಕರೆದುಕೋ, ಸ್ವಾಮಿ." ಹೀಗೆ ನಿಮಾಯಿ ತನ್ನಂತರಂಗದಲ್ಲಿ ಇರುವ ಎರಡು ಬಗೆಯ ವ್ಯಕ್ತಿತ್ವಗಳ ಪ್ರಕಟನೆ ಮಾಡಿದ. ಒಂದು **ಭಕ್ತ ನಿಮಾಯಿ,** ಮತ್ತೊಂದು **ಭಗವಂತ ನಿಮಾಯಿ.**

ಈ ಘಟನೆಗಳು ನದಿಯಾದ ಹಲವು ಜನರ, ಅದರಲ್ಲೂ ತಮ್ಮ ಪಾಂಡಿತ್ಯದ ಹಮ್ಮಿನಿಂದ ಮೆರೆಯುತ್ತಿದ್ದ ಪಂಡಿತರ ಕಣ್ಣು ತೆರೆಸಿತು. ಭಕ್ತಿ ಎಂದರೆ ಬರಿಯ ಭಾವುಕತೆಯ ಪ್ರದರ್ಶನವಲ್ಲ, ಮಹಾವ್ಯಕ್ತಿಯೊಬ್ಬ ತನ್ನ ಸಂಕಲ್ಪಮಾತ್ರದಿಂದ ಇತರರಿಗೆ ಅನುಗ್ರಹಿಸುವ ಗಹನವಾದ ತತ್ತ್ವವೆಂದು ಅವರಿಗೆ

ಅರಿವಾಯಿತು. ನಿಮಾಯಿ ತನ್ನ ನೆರೆಯ ಸ್ನೇಹಿತನಾದ ಗದಾಧರನಿಗೂ, ಅಹಂಕಾರದಿಂದ ಮೆರೆಯುತ್ತಿದ್ದ ತಾಪಸಿಯಾದ ಶುಕ್ಲಾಂಬರನಿಗೂ ತನ್ನ ಕರಸ್ಪರ್ಶದಿಂದಲೆ ಕೃಷ್ಣಭಕ್ತಿಯನ್ನು ಅನುಗ್ರಹಿಸಿದ ನಂತರ ಈ ಭಾವನೆ ಪಂಡಿತರಲ್ಲಿ ಇನ್ನೂ ಗಟ್ಟಿಯಾಯಿತು.

ಕೆಲವು ಪ್ರಮುಖ ಅನುಯಾಯಿಗಳ ಆಗಮನ

ನಿಮಾಯಿಯ ಮುಂದಿನ ಬದುಕಿನಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿದ ಹಲವಾರು ಮಹಾನ್ ವ್ಯಕ್ತಿಗಳು ಅವನ ಸುತ್ತಲೂ ನೆರೆದಿದ್ದು ಈ ಕಾಲದಲ್ಲಿಯೆ. ಅವರಲ್ಲಿ ಮೊದಲಿಗನೂ ಮುಖ್ಯನಾದವನೂ ನಿತ್ಯಾನಂದ ಎಂಬ ಸಂನ್ಯಾಸಿ. ಈತ ನಿಮಾಯಿಯ ಅಣ್ಣನೇ ಆಗಿದ್ದ ಎಂದು ಖಚಿತವಾಗಿ ನಂಬಲಾಗದ ಪ್ರತೀತಿಯೊಂದಿದೆ. ಅದೇನೇ ಇರಲಿ, ಈತ ಚಿಕ್ಕ ವಯಸ್ಸಿನಲ್ಲಿಯೆ ಸಂನ್ಯಾಸ ಸ್ವೀಕರಿಸಿದ್ದಂತೂ ನಿಜ. ಹಲವಾರು ಸ್ಥಳಗಳಿಗೆ ಯಾತ್ರೆ ಹೋಗಿ, ಕಡೆಗೆ ವೃಂದಾವನವನ್ನು ತಲುಪಿ, ಈಶ್ವರ ಪುರಿಗಳೆಂಬ ಮಹಾತ್ಮರನ್ನು ಸಂದರ್ಶಿಸಿದಾಗ "ನಿನ್ನ ಜೀವನದ ಗುರಿ ಶ್ರೀಕೃಷ್ಣನ ದರ್ಶನವೇ ಆಗಿದ್ದರೆ, ಒಡನೆ ನದಿಯಾಕ್ಕೆ ಹೋಗು" ಎಂದು ಅವರಿಂದ ಸಲಹೆ ಪಡೆದ.

ಶ್ರೀಕೃಷ್ಣನಿಗೆ ಬಲರಾಮ ಇದ್ದಂತೆ, ಮಹಾಪುರುಷನೊಬ್ಬನು ತನ್ನ ಸಂಗಡಿಗನಾಗಲು ಬರುವನೆಂದು ನಿಮಾಯಿಗೆ ಮೊದಲೆ ಅರಿವಿತ್ತು. ತಾನು ಕಾಯುತ್ತಿದ್ದ ಆ ವ್ಯಕ್ತಿಗೆ 'ನಿತಾಯಿ' ಎಂಬ ಹೆಸರನ್ನೂ ಅವನಾಗಲೇ ನೀಡಿದ್ದ. ನದಿಯಾದಲ್ಲಿ ಎಲ್ಲೆಡೆ ಹುಡುಕಿ, ಕಡೆಗೆ ನಿತ್ಯಾನಂದ ನಿಮಾಯಿಯನ್ನು ಕಂಡ. ಇಬ್ಬರೂ ಮೊದಲ ಭೇಟಿಯಲ್ಲಿಯೆ ಹಳೆಯ ಸ್ನೇಹಿತರಂತೆ ಆತ್ಮೀಯವಾಗಿ ನಡೆದುಕೊಂಡರು. ಆಗ ನಿತ್ಯಾನಂದನಿಗೆ ಹಠಾತ್ತನೆ ನಿಮಾಯಿಯ ಶರೀರದಲ್ಲಿ ನಾಲ್ಕು ಭುಜಗಳುಳ್ಳ ಗೌರಾಂಗ ಮೂರ್ತಿಯ ದರ್ಶನವಾಯಿತು. ಮೊದಲೆರಡು ಕೈಗಳಲ್ಲಿ ರಾಮನಂತೆ ಬಿಲ್ಲುಬಾಣಗಳು; ಮತ್ತೆರಡು ಕೈಗಳಲ್ಲಿ ಶ್ರೀಕೃಷ್ಣನಂತೆ ಕೊಳಲ ಅಂದ, ಇನ್ನೆರಡು ಕೈಗಳಲ್ಲಿ ಸಂನ್ಯಾಸಿಯಂತೆ ದಂಡಕಮಂಡಲುಗಳು— ಈ ಬಗೆಯ ಮೂರ್ತಿಯನ್ನು ನೋಡಿ ನಿತ್ಯಾನಂದ ಭಾವಾವಿಷ್ಟನಾದ. ಆಗ ಆ ಮೂರ್ತಿಯು ಅವನಿಗೆ ಹೀಗೆ ಅಭಯಪ್ರದಾನ ಮಾಡಿತು: "ಏಳು, ನಿನ್ನೆಲ್ಲ ಕೋರಿಕೆಗಳೂ ಈಡೇರುವುವು. ನೀನು ನಿನ್ನ ಒಡಲಲ್ಲಿ ಭಕ್ತಿಪ್ರೇಮಗಳ ಅಮೃತಧಾರೆಯನ್ನೆ ಹೊತ್ತು ತಿರುಗುವೆ." ನಂತರ ನಿತಾಯಿ (ನಿತ್ಯಾನಂದ ಎಂಬ ಹೆಸರಿನ ಸಂಕ್ಷಿಪ್ತ ರೂಪ) ತನ್ನ ಜೀವನದುದ್ದಕ್ಕೂ ನಿಮಾಯಿಯನ್ನು ನೆರಳಿನಂತೆ ಅನುಸರಿಸಿದ್ದನ್ನು ಕಾಣುತ್ತೇವೆ.

ನಿಮಾಯಿಗೆ ತುಂಬ ಆಪ್ತನಾದ ಮತ್ತೊಬ್ಬನೆಂದರೆ ಅದ್ವೈತ ಆಚಾರ್ಯ. ಈತ ನವದ್ವೀಪದಿಂದ ಹತ್ತು ಮೈಲುಗಳ ದೂರದಲ್ಲಿರುವ ಶಾಂತಿಪುರದ ನಿವಾಸಿ. ಶ್ರೀಮಂತನಷ್ಟೆ ಅಲ್ಲ, ವೈಷ್ಣವರ ನಾಯಕ ಕೂಡ. ಈ ಮುಂಚೆಯೇ ತಿಳಿಸಿರುವಂತೆ ಬಹು ಹಿಂದೆಯೆ, ನಿಮಾಯಿ ತನ್ನ ದೈವೀಸ್ವರೂಪವನ್ನು ಅವನಿಗೆ ಪ್ರಕಟಪಡಿಸಿದ್ದ. ಆದರೆ ಅದ್ವೈತ ಆಚಾರ್ಯನಿಗೆ ನಿಮಾಯಿಯಲ್ಲಿ ಸಂಪೂರ್ಣ ನಂಬಿಕೆ ಇರಲಿಲ್ಲ. ಹಾಗೆ ನಂಬಿಕೆ ಬಂದಿದ್ದು ಅವನು ಹಲವಾರು ಸಂದೇಹ–ಸಂಶಯಗಳ ಅಡ್ಡಗಳನ್ನು ದಾಟಿದ ನಂತರವೆ.

ನಿಮಾಯಿಯನ್ನು ಕೂಡಿಕೊಂಡ ಮತ್ತೊಬ್ಬ ಮುಖ್ಯ ವ್ಯಕ್ತಿಯೆಂದರೆ ಪುಂಡರೀಕ. ಈತ ಪೂರ್ವ ಬಂಗಾಳದ ಚಿತ್ತಗಾಂಗ್ ಎಂಬ ಊರಿನವನು, ಸಾತ್ವಿಕ ವ್ಯಕ್ತಿ. ಆದರೆ ಇವರೆಲ್ಲರಿಗಿಂತ ಮಿಗಿಲಾದವನೆಂದರೆ ಹರಿದಾಸ ಎಂಬ ಮುಸ್ಲಿಂ ಭಕ್ತ. ಈತ ಹರಿನಾಮೋಚ್ಚಾರಣೆ ಮತ್ತು ಹರಿ ಸಂಕೀರ್ತನೆಗಳನ್ನು ತಾನಾಗಿಯೇ ಅಭ್ಯಾಸ ಮಾಡಿಕೊಂಡವನು. ಮುಸ್ಲಿಮನಾದ ಹರಿದಾಸನು ಈ ರೀತಿಯಾಗಿ ವೈಷ್ಣವನಾದನು. ಇದಕ್ಕಾಗಿ ಮುಸ್ಲಿಂ ರಾಜನ ನ್ಯಾಯಾಧೀಶ ಕಾಜಿ ಅವನಿಗೆ ಕಠಿಣ ಶಿಕ್ಷೆ ವಿಧಿಸಿದನು. ಅದರಂತೆ ಆ ಪ್ರದೇಶದ ಹಳ್ಳಿಹಳ್ಳಿಗಳಲ್ಲಿಯೂ ಅವನು ಛಡಿಯೇಟು ತಿನ್ನಬೇಕಾಗಿತ್ತು. ಅಷ್ಟೇ ಅಲ್ಲ, ಅವನು ಸತ್ತು ಬೀಳುವವರೆಗೂ ಶಿಕ್ಷೆ ಮುಂದುವರೆಯುತ್ತಲೇ ಇತ್ತು.

ಭಾಗವತದಲ್ಲಿ ಬರುವ ಪ್ರಹ್ಲಾದನ ಕತೆಯಲ್ಲಿರುವಂತೆ, ಹರಿದಾಸ ಯಾವ ಬಗೆಯ ಶಿಕ್ಷೆಯಿಂದಲೂ ಸಾಯಲೇ ಇಲ್ಲ. ಬದಲಾಗಿ ಪ್ರತಿ ಛಡಿಯೇಟಿಗೂ ಚರ್ಮ ಕಿತ್ತು ಹೋಗಿ, ರಕ್ತ ಸುರಿಯುತ್ತಿದ್ದರೂ ಭಗವದ್ಧ್ಯಾನದಿಂದ ಉಂಟಾದ ಆನಂದದಲ್ಲಿ ಮುಳುಗಿಹೋಗಿರುತ್ತಿದ್ದ. ಅದಷ್ಟೇ ಅಲ್ಲ, ತಿಳುವಳಿಕೆ ಇಲ್ಲದೆ ತನ್ನನ್ನು ಹಿಂಸಿಸುತ್ತಿರುವವರನ್ನು ಕ್ಷಮಿಸಬೇಕೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದ. ಕೆಲ ಸಮಯದ ನಂತರ ಭಾವಾವಿಷ್ಟನಾಗಿಬಿಡುತ್ತಿದ್ದ. ಆತನ ಭಕ್ತಿ ಆವೇಶದಿಂದ ನೆರೆದಿದ್ದ ಜನರಲ್ಲೂ ಭಕ್ತಿಭಾವ ಉಂಟಾಯಿತು. ಕಡೆಗೆ, ಅವನು ಸತ್ತನೆಂದೇ ತಿಳಿದು, ಅವನ ಜರ್ಝರಿತ ದೇಹವನ್ನು ಕಾವಲುಗಾರರು ನದಿಗೆ ಎಸೆದರು. ಆದರೆ ನದಿಯ ನೀರಿನ ಶೀತಲಸ್ಪರ್ಶ ಹರಿದಾಸನ ಪ್ರಜ್ಞೆಯನ್ನು ಮರುಕಳಿಸಿತು. ಹೇಗೋ ಈಜಿಕೊಂಡು ದಡವನ್ನು ತಲುಪಿದ. ಈ ಘಟನೆಗಳ ಬಗ್ಗೆ ದೂತರಿಂದ ತಿಳಿದ ಕಾಜಿಯ ಮನಸ್ಸೂ ಕರಗಿತು. ಹರಿದಾಸನಿಗೆ ಗೌರವ ಸಲ್ಲಿಸಲು ತಾನೂ ಅವನಲ್ಲಿಗೆ ಹೊರಟುಬಂದ.

(ಮುಂದುವರಿಯುವುದು)